178

ಮೈಸೂರ ಗಿಜಿಟ.

ಸಂ. XXXI.] ಸರ್ಕಾರದಿಂದ ಘಾಯಿಷ್ ಆದ್ದು [ನಂ. 27.

ಬೆಂಗಳೂರು, ಗುರುವಾರ, ಜುಲೈ ತಾ|| 9, ಸ್ ೧೮೯೬.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪೌಂಡೋಲರವರು, ಪಬ್ಲಿಕ್ ವರ್ಕಸ್ ಆಫಿಸರ್ಗಳು, ಫಾರೆನ್ಸ್ಟು, ರೆಜಿಸ್ಟ್ರೇರ್ಷ ವ ಯಡ್ಮೀ ಕೇರ್ಷ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಪೋಡ್ರ್ ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆರ್ಷ ಜಡ್ಜ್ಗಿರು, ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್ಗಿರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆನ್ಸ್ಟು ಆಫಿಸರ್ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟಿಸ್ ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆ ಕ್ಟುಗಳು ವ ರೆಗ್ಯುಲೇರ್ಷಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

ಈ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 16ನೇ ಜೂ ೧೮೯೬.

ನಂ. 10983.—ಫೈ. 782, ಮೆಸ್ಟರ್ ಎ. ವೀರಾಮಿ ಮೊದಲಿಯಾರ್ ಯವರಿಗೆ, 1896ನೇ ನೇ 18ನೇ ಮಸ್ತ್ರಂ 10045.—ಫೈ. 706—7ನೇ ನಂಬರ್ ಗವರ್ಮೆಂಟ್ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟಿದ್ದ ಐದು ದಿನಗಳ ಕ್ಯಾಜುಯಲ್ ರಜಾ ಇನ್ನೂ ಎರಡು ದಿನಗಳು ಜಾಸ್ತಿ ಮಾಡಲ್ಪಟ್ಟು ಒಟ್ಟು ರಜಾವನ್ನ ಮೈಸೂರ್ ಸರ್ವಿಸ್ ರೆಗ್ಯುಲೇರ್ಷಗಳ 172ನೇ ಆರ್ಟಿಕಲ್ ಅನುಸರಿಸಿ, ರಜಾವಾಗಿ ಯಣಿಸಲ್ಪಟ್ಟಿರುತ್ತೆ.

ತಾರೀಖು 19ನೇ ಜೂ ೧೮೯೬.

ನಂ. 13643.—ಜು. 1561, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ, ಮೈಸೂರ್ ಸಿವಿಲ್ ಸರ್ವೀಸಿನಲ್ಲಿರಾದ ಮೆಸ್ಟರ್ ಟಿ. ವಿ. ಅರ್ಮುಗಂ ಮೊದಲಿಯಾರ್ರು ಮೈಸೂರ್ ಜೈಲಿನ ಸೂಪರ್ಟೆಂಡೆಂಟರಾಗಿ ಹಂಗಾಮಿಯಾ ತರೀಕ್ ಕೆಲಸ ನೋಡುವ ಕಾಲದಲ್ಲಿ 2ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ. ಮತ್ತು 37ನೇ ಸೆಕ್ಷನ್ ಅನುಸರಿಸಿ, 4ನೇ ಷೆಡ್ಯೂಲಿನಲ್ಲಿ ಜಾಸ್ತೀ ಅಧಿಕಾರವಾಗಿ ವಿವರಿಸಲ್ಪಟ್ಟ ಮೇಲ್ಕಂಡ ಕ್ಲಾಸಿನ ಮಾಜಿಸ್ಟ್ರೇಟರಿಗೆ ಗವರ್ಮೆಂಟಿನವರು ಕೊಡಬಹುದಾದ ಈ ಕೆಳಗೆ ಕಂಡ ಅಧಿಕಾರವು ಜೈಲ್ ನಿರಹದ್ದಿನಲ್ಲಿ ಚಲಾಯಿಸುವ ಬಗ್ಯೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಕೋರಡೇ ಸಜಾಗಳನ್ನು ವಿಧಿಸಲಿಕ್ಕೆ ಅಧಿಕಾರ, ಸೆಕ್ಷನ್ 32.

ತಾರೀಖು 20ನೇ ಜೂ ೧೮೯೬.

ನಂ. 13692.—ಮಿ. 2050, ಮೈಸೂರ ಸರ್ವಿಸ್ ರೆಗ್ಯುಲೇಷಗಳ 171ನೇ ಆರ್ಟಿಕಲ್ ಅನುಸರಿಸಿ, ಗವರ್ನಮೆಂಟ್ ಆಕ್ಟಿಂಗ್ ಅಂಡರ್ ಸೆಕ್ರಟೆರಿಯವರಾದ ಮೆಸ್ಸರ್ ಟಿ. ಪರಮಾವಅಯ್ಯರ್ ಬಿ. ಎ. ಯವರಿಗೆ, 1896ನೇ ಜೂ 18ನೇ ಮಾರ್ಕ್ಕಂ ಲಾಗಾಯತು ಎರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 13704.—ಜ. 1565, ಮೈಸೂರ ಸರ್ವಿಸ್ ರೆಗ್ಯುಲೇಷಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆಸ್ಸರ್ ಪಿ. ಎಫ್. ಬೌರಿಂಗ್‌ಯವರಿಗೆ, 1896ನೇ ಜೂ 16ನೇ ಮಾರ್ಕ್ಕಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೇ ಜೂ ೧೮೯೬, ಮೊಕ್ಕಾಂ ಮೈಸೂರ.

ನಂ. 14030.—ಮಿ. 2100, ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆಸ್ಸರ್ ಪಿ. ಎಫ್. ಬೌರಿಂಗ್ ಯವರು, ಅಸಿಸ್ಟೆಂಟ್ ಕಮ್ಮಿಷನರಾಗಿ ಆಕ್ಟಿಂಗ್ ತರೀಕ ಮೊಕರರ್ ಮಾಡಲ್ಪಟ್ಟು ಮತ್ತು ಹಾಸನ ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುತ್ತಾರೆ.

ನಂ. 14031.—ಮಿ. 2101, ಈ ಕೆಳಗೆ ಕಂಡ ಫಾರೆಸ್ಟ್ ಆಫಿಸರುಗಳ ಸಂಗಾಪಿ ಬಡ್ತಿಗಳು, ಮೆಸ್ಸರ್ಸ್ ಜಿ. ರಿಕ್ಕೆಟ್ಸ್ ವ ಸಿ. ಈ. ಎಂ. ರಸ್ಸಲ್ ಯವರುಗಳು ರಜಾದಮೇಲೆ ಹೊರಟ ತಾರೀಖು ಲಾಗಾಯತು ಹುಕುಂ ಮಾಡಲ್ಪಟ್ಟಿರುತವೆ:—

ಮೆಸ್ಸರ್ ಜಿ. ರಿಕ್ಕೆಟ್ಸ್ ಯವರು ರಜಾದ ಮೇಲಿರುವ ಕಾಲದಲ್ಲಿ—

1. ಮೆಸ್ಸರ್ ಬಿ. ಹೀರಾಸಿಂಗ್ ಯವರು 3ನೇ ಕ್ಲಾಸ್ ಅಸಿಸ್ಟೆಂಟ್ ಕ್ವಾರ್ಟರ್‌ವೇಟರಿಂದ 2ನೇ ಕ್ಲಾಸ್ ಅಸಿಸ್ಟೆಂಟ್ ಕ್ವಾರ್ಟರ್‌ವೇಟರಿಗೆ.
2. ಮೆಸ್ಸರ್ ಎಂ. ಜಿ. ರಾಮರಾಯರು ಸಬ್ ಅಸಿಸ್ಟೆಂಟ್ ಕ್ವಾರ್ಟರ್‌ವೇಟರಿಂದ 3ನೇ ಕ್ಲಾಸ್ ಅಸಿಸ್ಟೆಂಟ್ ಕ್ವಾರ್ಟರ್‌ವೇಟರಿಗೆ.

ಮೆಸ್ಸರ್ ಸಿ. ಈ. ಎಂ. ರಸ್ಸಲ್‌ಯವರು ರಜಾದ ಮೇಲಿರುವ ಕಾಲದಲ್ಲಿ—

1. ಮೆಸ್ಸರ್ ಅಬ್ದುಲ್ ಕರೀಂಯವರು 2ನೇ ಕ್ಲಾಸ್ ಡೆಪ್ಯುಟಿ ಕ್ವಾರ್ಟರ್‌ವೇಟರಿಂದ 1ನೇ ಕ್ಲಾಸ್ ಡೆಪ್ಯುಟಿ ಕ್ವಾರ್ಟರ್‌ವೇಟರಿಗೆ.
2. ಮೆಸ್ಸರ್ ಸಿ. ನಾರಾಯಣರಾಯರು 3ನೇ ಕ್ಲಾಸ್ ಡೆಪ್ಯುಟಿ ಕ್ವಾರ್ಟರ್‌ವೇಟರಿಂದ 2ನೇ ಕ್ಲಾಸ್ ಡೆಪ್ಯುಟಿ ಕ್ವಾರ್ಟರ್‌ವೇಟರಿಗೆ.
3. ಮೆಸ್ಸರ್ ಎಸ್. ಪಿ. ಬಾಪುರಾಯರು 1ನೇ ಕ್ಲಾಸ್ ಅಸಿಸ್ಟೆಂಟ್ ಕ್ವಾರ್ಟರ್‌ವೇಟರಿಂದ 3ನೇ ಕ್ಲಾಸ್ ಡೆಪ್ಯುಟಿ ಕ್ವಾರ್ಟರ್‌ವೇಟರಿಗೆ.
4. ಮೆಸ್ಸರ್ ಎಂ. ವೆಂಕಟನಾರಣಪ್ಪನವರು 2ನೇ ಕ್ಲಾಸ್ ಅಸಿಸ್ಟೆಂಟ್ ಕ್ವಾರ್ಟರ್‌ವೇಟರಿಂದ 1ನೇ ಕ್ಲಾಸ್ ಅಸಿಸ್ಟೆಂಟ್ ಕ್ವಾರ್ಟರ್‌ವೇಟರಿಗೆ.
5. ಮೆಸ್ಸರ್ ಸಿ. ಅಪ್ಪಯ್ಯನವರು 3ನೇ ಕ್ಲಾಸ್ ಅಸಿಸ್ಟೆಂಟ್ ಕ್ವಾರ್ಟರ್‌ವೇಟರಿಂದ 2ನೇ ಕ್ಲಾಸ್ ಅಸಿಸ್ಟೆಂಟ್ ಕ್ವಾರ್ಟರ್‌ವೇಟರಿಗೆ.
6. ಮೆಸ್ಸರ್ ಕೆ. ಶಾಮಯ್ಯಂಗಾರ್ರು ಸಬ್ ಅಸಿಸ್ಟೆಂಟ್ ಕ್ವಾರ್ಟರ್‌ವೇಟರಿಂದ 3ನೇ ಕ್ಲಾಸ್ ಅಸಿಸ್ಟೆಂಟ್ ಕ್ವಾರ್ಟರ್‌ವೇಟರಿಗೆ.

ತಾರೀಖು 23ನೇ ಜೂ ೧೮೯೬.

ನಂ. 13719.—ಜ. 1569, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 357ನೇ ಸೆಕ್ಷನ್ ನಿಯಮಗಳನುಸರಿಸಿ, ತುಮಕೂರು 2ನೇ ಕ್ಲಾಸ್ ಮಾಜಿಸ್ಟ್ರೇಟ್ ವ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ವಿ. ಶ್ರೀನಿವಾಸಾಚಾರ್ಲು ಯವರು, ಅವರಿಂದ ಪರ್ಯಾಪ್ತೀ ಮಾಡಲ್ಪಟ್ಟ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಸಾಕ್ಷ್ಯವನ್ನು ಇಂಗ್ಲಿಷ್ ಭಾಷೆಯಲ್ಲಿ ಸ್ವದಸ್ತೂರ್ ತೆಗದುಕೊಳ್ಳುವ ಬಗ್ಗೆ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

ತಾರೀಖು 2ನೇ ಜುಲೈ 1896.

ನಂ. 68.—ಮಿ. ಫೈ. 65-93, ಮೈಸೂರ ಶ್ರೀಮತ್ ಮಹಾರಾಜರವರಿಗೆ ಉಪಾಧ್ಯಾಯರಾದ ಮೆಸ್ಸರ್ ಜೆ. ಜೆ. ವೈಟ್ಲ್ಲಿಯವರಿಗೆ, 1896ನೇ ಜೂ 1ನೇ ಮಾರ್ಕ್ಕಂ 12987.—ಮಿ. 65—93ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟಿದ್ದ ಮೂರು ತಿಂಗಳ ಪ್ರಿವಿಲೀಜ್ ರಜಾವನ್ನ 1896ನೇ ಏಪ್ರೀಲ್ ಗುರ್ರೇ ಲಾಗಾಯತು ಉಪಯೋಗಿಸಿಕೊಂಡು 1896ನೇ ಜೂ 20ನೇ ಮಾರ್ಕ್ಕಮಿನ ಪೂರ್ವಾರ್ನ್ಹದಲ್ಲಿ ಪುನಹ ಕೆಲಸಕ್ಕೆ ವಾಪಸ್ ಬಂದಿರುವ ಸಬಬ್ ಉಪಯೋಗಿಸಿಕೊಳ್ಳದೇ ಉಳಿದ ರಜಾ ಭಾಗವು ರದ್ದು ಮಾಡಲ್ಪಟ್ಟಿರುತ್ತೆ.

ನಂ. 88.—ಮಿ. ಫೈ 3—93, ಬಂದನೇ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟ್ ಮೆಸ್ಸರ್ ರಂಗಣ್ಣ, ಎಲ್. ಎಂ. ವ ಎಸ್., ಯವರು 2ನೇ ಕ್ಲಾಸ್ ಆಕ್ಟಿಂಗ್ ಸಬ್ ಅಸಿಸ್ಟೆಂಟ್ ಸರ್ಜ್ಜನ್‌ರಾಗಿ ಸಬ್ ಪ್ರೋಟೆಂ ತರೀಕ ಮೊಕರರ್ರಾಡಲ್ಪಟ್ಟಿರುತ್ತಾರೆ

ನಂ. 73.—ಮಿ. 12, ಗ್ರಾಮ ಉದ್ಯೋಗಸ್ಥರ ನಡವಳಿಕೆ ಬಗ್ಗಾಗಿ ಅವರಿಗೆ ಪೋಸ್ಟ್ ಆಫಿಸಿನ ಉದ್ಯೋಗಸ್ಥರು ಮತ್ತು ನೌಕರ್‌ಮಾನೇರ ವಿಷಯದಲ್ಲರ್ತಕ್ಕ ಸಂಬಂಧವನ್ನ ಕುರಿತ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಜಾರೀಲಿರುವ ಈ ಕೆಳಗೆ ಕಂಡ ರೂಲ್ಸು ಮೈಸೂರ ಶೀಮೆಗೆ ಲಗಾವ್ ಮಾಡಲ್ಪಟ್ಟು ಸದರೀ ಶೀಮೆಯಲ್ಲಿರುವ ಗ್ರಾಮ ಉದ್ಯೋಗಸ್ಥರ ತಿಳುವಳಿಕೆ ಮತ್ತು ನಡವಳಿಕೆ ಬಗ್ಗಾಗಿ ಫಾಮಿಷ್ ಮಾಡಲ್ಪಟ್ಟಿರುತವೆ.

ರೂಲ್ಸ್.

1. ಕಾಗದಗಳನ್ನ ತೆಗೆದುಕೊಳ್ಳುವ ಬಗ್ಗೆ ಜಾಸ್ತಿ ಟಪ್ಪಾಲ್ ಪೆಟ್ಟಿಗೆಗಳನ್ನ ಸ್ಥಾಪಿಸುವದರಿಂದಲೂ ಮತ್ತು ಗ್ರಾಮ ಟಪ್ಪಾಲಿನವನನ್ನು ವಿಶಿಷ್ಟ ಗ್ರಾಮಗಳಿಗೆ, ಮುಖ್ಯವಾಗಿ ಟಪ್ಪಾಲ್ ಪೆಟ್ಟಿಗೆಗಳು ರಿಜಿಸ್ಟ್ರರತಕ್ಕ ಸ್ಥಳಗಳಿಗೆ, ಬಹಳ ಕ್ರಮವಾಗಿ ಮತ್ತು ಸರಿಯಾಗಿ ಹೋಗಿ ನೋಡಿಕೊಳ್ಳುವ ಹಾಗೆ ಮಾಡುವದರಿಂದಲೂ ಬಹಳ ದೂರವಾದ ಗ್ರಾಮಗಳಲ್ಲಿ ಟಪ್ಪಾಲ್ ಸಾಕರ್ಯಗಳನ್ನು ವಿಸ್ತರಿಸುವದಕ್ಕೆ ಪೋಸ್ಟಲ್ ಇಲಾಖೆಯವರಿಂದ ಪ್ರಯತ್ನಗಳು ಮಾಡಲ್ಪಡುತಲಿವೆ.

2. ಹೊಸ ಟಪ್ಪಾಲ್ ಪೆಟ್ಟಿಗೆಗಳು ರೂಲ್ ಮೇರೆ ಗ್ರಾಮ ಮೊಖ್ತೇಸರರ ವಶದಲ್ಲಿ ಯಿಡಲ್ಪಡುವವು, ಅಂದರೆ ಪೆಟ್ಟಿಗೆಗಳು ಅವರ ಮನೆಗಳ ಮುಂದೆ ಎಲ್ಲೀಗೂ ಬಳಿಕೆಯಾಗಿರತಕ್ಕ ಸ್ಥಳಗಳಲ್ಲಿ ಭದ್ರಪಡಿಸಲ್ಪಡುವವು. ಅವರುಗಳು ಅವುಗಳನ್ನು ತೆಗಿಯಬೇಕಾದ ಯಾ ಅವುಗಳಲ್ಲಿರತಕ್ಕವುಗಳನ್ನು ವ್ಯವಸ್ಥೆ ಮಾಡಬೇಕಾದ ಅವಶ್ಯಕ ವಿರುವದಿಲ್ಲ. ಇದು ಸದರೀ ಟಪ್ಪಾಲ್ ಪೆಟ್ಟಿಗೆಗಳ ಬೀಗದ ಕೈಗಳನ್ನ ಯಿಟ್ಟುಕೊಂಡಿರುವ ಟಪ್ಪಾಲಿನವರಿಂದ ಮಾಡಲ್ಪಡುವದು. ಗ್ರಾಮ ಟಪ್ಪಾಲಿನವರು ಗ್ರಾಮಗಳಿಗೆ ಬರುವದರಲ್ಲಿ ಸರಿಯಾಗಿ ವ ಕ್ರಮವಾಗಿ ಯಿರುವದಕ್ಕೂ ಮತ್ತು ಸದರೀ ಟಪ್ಪಾಲು ಪೆಟ್ಟಿಗೆಗಳನ್ನ ಅವುಗಳ ಮೇಲೆ ತಿಳಿಸಲ್ಪಟ್ಟ ವಾರದ ಆಯಾ ದಿನಗಳಲ್ಲಿ ತೆರಪು ಮಾಡಿದ್ದಕ್ಕೂ ಮತ್ತು ಹಾಗೆ ಮಾಡದಿದ್ದರೆ ಪೋಸ್ಟ್ ಆಫಿಸುಗಳ ಇನ್‌ಸ್ಪೆಕ್ಟರಾಗಲಿ ಯಾ ತಪ್ಪಿತಸ್ಥನಾದ ಗ್ರಾಮ ಟಪ್ಪಾಲಿನವನು ಸಂಬಂಧಪಟ್ಟ ಆಫಿಸಿನ ಸಬ್ ಪೋಸ್ಟ್ ಮಾಸ್ಟರಿಗಾಗಲಿ ಲಿಖಿತಮೂಲಕ ಯಾ ದೋಷರೂಪಕವಾದ ಅಕ್ರಮದ ಸ್ವಭಾವವನ್ನ ವಿಜಿಟ್ ಬುಕ್ಕಿನಲ್ಲಿ ಸಂಕ್ಷೇಪವಾಗಿ ಗುರ್ತು ಮಾಡುವದರ ಮೂಲಕ ರಿಪೋರ್ಟು ಮಾಡಲಿಕ್ಕೂ ಗ್ರಾಮ ಮೊಖ್ತೇಸರರು ಜವಾಬ್ದಾರರಾಗಿರತಕ್ಕದ್ದು. ಟಪ್ಪಾಲಿನವರು ಇದಕ್ಕಾಗಿ ವಿಜಿಟ್ ಬುಕ್ಕುಗಳನ್ನ ಸರಬರಾಯಿ ಮಾಡಲ್ಪಡುವರು, ಆದರಲ್ಲಿ ಪ್ರತಿ ಗ್ರಾಮದ ಮೊಖ್ತೇಸರನೂ ತನ್ನ ಹೆಸರನ್ನ ರುಜು ಮಾಡತಕ್ಕದ್ದು ಮತ್ತು ಸಾಧ್ಯವಾದ ಮಟ್ಟಿಗೂ ತಕ್ಕ ಕಲವಿನಲ್ಲಿ ಬಂದ ತಾರೀಖಿನ್ನು ಗುರ್ತು ಮಾಡತಕ್ಕದ್ದು. ಏನಾದರೂ ಅಕ್ರಮಗಳು ಅಂದರೆ, ನಿಯಮಿಸಲ್ಪಟ್ಟ ತಾರೀಖಿನಲ್ಲಿ ಗೈರ್ ಹಾಜರಾಗುವಣ, ತನ್ನ ವಿಜಿಟ್ ಬುಕ್ಕನ್ನು ಹಾಜರ್ಮಾಡಲಿಕ್ಕೆ ತಪ್ಪುವಣ, ಯಾ ಯಂಥಾವುಗಳು ಕಂಡು ಬಂದರೆ ಕೂಡ್ಲೆ ಮೊಖ್ತೇಸರನು ಅವುಗಳನ್ನ ಮೇಲ್ಕಂಡ ಆಫಿಸರುಗಳ ತಿಳುವಳಿಕೆಗೆ ತರಕ್ಕದ್ದು. ಟಪ್ಪಾಲ್ ಅಧಿಕಾರಿಗಳಿಗೆ ಟಪ್ಪಾಲ್ ವಿಷಯಕವಾದ ತಿಳುವಳಿಕೆಗಳನ್ನು ಲಕ್ಕೋಟೆಯ ಮೇಲೆ "ಟಪ್ಪಾಲ್ ಸರ್ಕಾರಿ" ಎಂಬ ಮಾತುಗಳನ್ನು ಮೇಲ್ ವಿಳಾಸ ಬರೆದು ಮತ್ತು ಗ್ರಾಮ ಮುಖ್ಯಸ್ಥನು ಯಡಗಡೆ ಕೊನೆಯ ಕೆಳಭಾಗದಲ್ಲಿ ರುಜು ಮಾಡಿ ಟಪ್ಪಾಲ್ ಹಾಸಲಿಲ್ಲದೆ ರವಾನಿಸಬಹುದು.

3. ಟಪ್ಪಾಲ್ ರನ್ನರ್‌ಗಳು ನುಳಿಗಳು, ಪ್ರವಾಹಗಳು, ವಗೈರೆಗಳಲ್ಲಿ ಟಪ್ಪಾಲ್‌ಗಳನ್ನ ಸಾಗಿಸುವದಕ್ಕೆ ಅನುಕೂಲ ಪಡಿಸುವ ಬಗ್ಯಾಗಿ ಸಹಾಯವನ್ನ ಸೇಕ್ಷಿಸುವಾಗ ರನ್ನರ್‌ಗಳು ಹೋಗುವ ರಸ್ತೆಯ ಉದ್ದಕ್ಕೂ ಸಮೀಪದಲ್ಲಿರುವ ಗ್ರಾಮಗಳ ಮುಖ್ಯಸ್ಥರು ಅವರುಗಳಿಗೆ ವಿಶಿಷ್ಟ ಸಹಾಯವನ್ನೂ ಕೊಡಬೇಕು. ಪೋಸ್ಟಲ್ ಇಲಾಖೆಯ ಮೇಲ್ಪಟ್ಟ ಆಫಿಸರುಗಳು ಯಾವ ಗ್ರಾಮವನ್ನಾಗಲಿ ನೋಡಲು ಬಂದಾಗ ಅವರಿಗೆ ಬೇಕಾಗಬಹುದಾದ ವಿಶಿಷ್ಟ ಸಹಾಯವನ್ನೂ ಮತ್ತು ವರ್ತಮಾನವನ್ನೂ ಕೊಡಬೇಕು.

4. ಪೋಸ್ಟಲ್ ಅಧಿಕಾರಿಗಳಿಗೆ ಸಹಾಯವನ್ನು ಮತ್ತು ಟಪ್ಪಾಲಿನವರು, ರನ್ನರ್‌ಗಳು, ವಗೈರೇರ ಕೆಲಸಗಳಿಗಾಗಿ ನಂಬಿಕೆಯಾದ ವ ಲಾಯಖಾದ ಜನಗಳನ್ನ ಹುಡುಕಿಸುವ ಬಗ್ಯೆ ವರ್ತಮಾನವನ್ನೂ ಗ್ರಾಮ ಆಫಿಸರುಗಳು ಕೇಳಲ್ಪಟ್ಟಾಗ ಕೊಡಬೇಕು, ಅವರುಗಳು ಗ್ರಾಮ ಟಪ್ಪಾಲಿನವರಿಗೆ ಮನಿಆರ್ಡರುಗಳ ಪಾವತೀದಾರರನ್ನ ಗುರುತು ಹಿಡಿಯುವದರಲ್ಲಿಯೂ ಮತ್ತು ಅವರ ರೂಬರೂ ಹಣ ಪಾವತಿಯಾದರೆ ಹಾಗೆ ಪಾವತಿಯಾದ್ದಕ್ಕೆ ಸಾಕ್ಷಿಭೂತವಾಗಿ ರುಜು ಮಾಡಲಿಕ್ಕೂ ಸಹ ಸಹಾಯಮಾಡಬೇಕು.

5. ಗ್ರಾಮ ಟಪ್ಪಾಲಿನವರು ಮನಿಆರ್ಡರುಗಳ ಪಾವತಿಗಾಗಿ ಅವರ ಸ್ವಾಧೀನದಲ್ಲಿ ಯೊಬಲಗು ಸಮೇತ ಪ್ರಯಾಣ ಮಾಡುವಾಗ ಯಾವ ಗ್ರಾಮದಲ್ಲಾದರೂ ರಾತ್ರಿಕಾಲದಲ್ಲಿ ತಂಗಬೇಕಾಗಿ ಬಂದಲ್ಲಿ ರಾತ್ರಿಕಾಲದಲ್ಲಿ ಯೊಬಲಗನ್ನ ಬಂದೋಬಸ್ತಿನಿಂದ ಕಾಪಾಡತಕ್ಕ ವಿಷಯದಲ್ಲಿ ಸಹಾಯ ಕೇಳಲ್ಪಟ್ಟರೆ ಗ್ರಾಮ ಮುಖ್ಯಸ್ಥನು ತನಗೆ ಸಾಧ್ಯವಾದ ಮಟ್ಟಿಗೆ ಅವರುಗಳಿಗೆ ಸಹಾಯಮಾಡಬೇಕು.

ತಾರೀಖು 3ನೇ ಜುಲೈ 1896.

ನಂ. 126.—ವಿ. ಫೈ. 48—92, ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಬಂದು ಗವರ್ನಮೆಂಟ್ ಟೆಲಿಗ್ರಾಫ್ ಆಫಿಸು (ಅಂಚೆ ಮತ್ತು ಟೆಲಿಗ್ರಾಫ್ ಕೂಡಿಸಿ) ನಂಜೀನಗೂಡಿನಲ್ಲಿ 1896ನೇ ಜೂ 21ನೇ ಮಂಗಳವಾರದಲ್ಲಿನಿಂದ ಸ್ಥಾಪಿಸಲ್ಪಟ್ಟಿರುತ್ತೆ.

ತಾರೀಖು 6ನೇ ಜುಲೈ 1896.

ನಂ. 2227.—ವಿ. 51, ಸ್ಯ 1890ನೇ ಇಸವಿಯ VIನೇ ಮೈಸೂರ್ ಆರಂಸ್ ರೆಗ್ಯುಲೇಷನಿನ 22ನೇ ಸೆಕ್ಷನಿನಿಂದ ಕೊಡಲ್ಪಟ್ಟ ಅಧಿಕಾರವನ್ನ ಚಲಾಯಿಸುವದರಲ್ಲಿ ಸದರೀ ರೆಗ್ಯುಲೇಷನಿನ 8, 9, 10 ಮತ್ತು 11ನೇ ಸೆಕ್ಷನ್‌ಗಳಲ್ಲಿ ಅಡಗಿರುವ ವಿಶಿಷ್ಟ ನಿಬಂಧನೆಗಳು ಮತ್ತು ನಿರೂಪಣೆಗಳಿಂದ ಕೆಲವು ಜನಗಳನ್ನು ಮೈಸೂರ್ ಕೇಮೆಯಲ್ಲಿ ಬಿಡುಗಡೆ ಮಾಡುವ 1896ನೇ ಏಪ್ರೆಲ್ 27ನೇ ಮಂಗಳವಾರದ 12079.—ವಿ. 1730ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿ ಮಾಡಿರುವ ಮೇರೆ 1895ನೇ ಮೇ 1ನೇ ಮಂಗಳವಾರದ 1ನೇ ನಂಬರ್ (ಜನರಲ್) ಇಸ್ತಿಹಾರ್‌ನಾಮೆಯ 1ನೇ ಪ್ಯಾರಾವಿನ (II)ನೇ ಕ್ಲಾಜಿನಲ್ಲಿರುವ "ಎಲ್ಲಾ ಟಪ್ಪಾಲ್ ರನ್ನರ್‌ಗಳೂ" ಎಂಬ ಮಾತುಗಳ ತರುವಾಯ "ಮತ್ತು ಗ್ರಾಮದ ಟಪ್ಪಾಲಿನವರು" ಎಂಬ ಮಾತುಗಳನ್ನು ಕೇರಿಸುವ ಬಗ್ಯೆ ಮೈಸೂರ್ ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ.

ನಂ. 235.—ಜ್ಯು. 20, ಫೈಂಬರ್‌ಕ್ಸ್ ಸಬ್ ಡಿವಿಜ್ ಪೊಲೀಸ್ ಅಸಿಸ್ಟೆಂಟ್ ಸೂಪರಿಟೆಂಡೆಂಟ್ ಮೆಸ್ಟರ್ ಎಂ. ನಂಜರಾಜ ಅರಸಿನವರಿಗೆ, 1896ನೇ ಏಪ್ರೆಲ್ 16ನೇ ಮಂಗಳವಾರ ಕ್ಯಾಂಪ್ 150ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಹತ್ತು ದಿನಗಳ ಕ್ಯಾಜುಯಲ್ ರಜಾವನ್ನ ಅವರು ಉಪಯೋಗಿಸಿಕೊಳ್ಳದ ಸಬಬು ಅದನ್ನ ಅವರ ಕೋರಿಕೆಯಂತೆ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 16ನೇ ಜುಲೈ 1896.

ನಂ. 10945.—ರೆ. ಫೈ. 138—95, ತಿರುಮಕೂಡ್ಲು ನರಸೀಪುರದ ತಾಲ್ಲೂಕು ಅಮಲ್ದಾರ್ ಜೆ. ಹನುಮಂತರಾಯರಿಗೆ, 196ನೇ ಜೂ 10ನೇ ಮಂಗಳವಾರ 10770.—ರೆ. 4249ನೇ ನಂಬರ್ ಗವರ್ನಮೆಂಟ್ ಇಸ್ತಿಹಾರಿನ ಮೇರೆ ಕೊಡಲ್ಪಟ್ಟಿದ್ದ ಬಂದು ತಿಂಗಳ ಪ್ರಿವಿಲೀಜ್ ರಜಾ ಇನ್ನೂ ಎರಡು ತಿಂಗಳು ಜಾಸ್ತೀ ಮಾಡಲ್ಪಟ್ಟಿರುತ್ತೆ.

ತಾರೀಖು 18ನೇ ಜೂ 1896.

ನಂ. 11059.—ಫಾ. ಫೈ. 61—95, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 172ನೇ ಆರ್ಟಿಕಲ್ ಅನುಸರಿಸಿ, ಕಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ಗಳ ಡೆಪ್ಯುಟಿ ಕ್ಷಸರ್ವೇಟರ್ ಮೆಸ್ಟರ್ ಸಿ. ನಾರಾಯಣರಾಯರಿಗೆ, 1896ನೇ ಜೂ 10ನೇ ತಾರೀಖಿನಾರಭ್ಯ ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 11062.—ಫಾ. ಫೈ. 123—95, ಫಾರೆಸ್ಟ್ಗಳ ಅಸಿಸ್ಟೆಂಟ್ ಕ್ಷಸರ್ವೇಟರ್ ಮೆಸ್ಟರ್ ಸಿ. ಅಪ್ಪಯ್ಯನವರಿಗೆ, 1896ನೇ ಮೇ 15ನೇ ಮುರ್ಕುಂ 9973.—ಫಾ. ಫೈ. 123—95ನೇ ನಂಬರ್ ಇಸ್ತಿಹಾರ್ನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟಿದ್ದ ಒಂದು ತಿಂಗಳ ಪ್ರಿವಿಲೀಜ್ ರಜಾವನ್ನು ಮೇ 13ನೇ ಮುರ್ಕುಮಿನ ಪೂರ್ವಾನ್ವದಾರಭ್ಯ ಉಪಯೋಗಿಸಿಕೊಂಡು 1896ನೇ ಜೂ 6ನೇ ತಾರೀಖಿನ ಪೂರ್ವಾನ್ಹದಲ್ಲಿ ಕೆಲಸಕ್ಕೆ ವಾಪಸು ಬಂದ ಸಬಬ್ ಉಪಯೋಗಿಸಿಕೊಳ್ಳದೆ ಉಳಿದ ರಜಾ ಭಾಗ ಅಂದರೆ ಏಳು ದಿನಗಳು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ತಾರೀಖು 23ನೇ ಜೂ 1896.

ನಂ. —ಇದರಿಂದ ಪ್ರಸಿದ್ಧಪಡಿಸುವದೇನಂದರೆ,—1894ನೇ ಇಸವಿಯ VIIನೇ ಮೈಸೂರ್ ಲ್ಯಾಂಡ್ ಅಕ್ವಿಜಿಷ್ಷ್ ರೆಗ್ಯುಲೇಷನಿನ 6ನೇ ಸೆಕ್ಷ್ಷ್ ಅನುಸರಿಸಿ, ಇದರಡಿ ಕಂಡ ಜಮೀನ್ಗಳು ಸರ್ಕಾರ್ ಕೆಲಸಕ್ಕೆ ಅಂದರೆ, ಬೆಂಗಳೂರು ಸಿಟಿಯ ಸದರ್ ಮಹಾರಾಟ್ಟಾ ರೈಲ್ವೆ ಗೂಡ್ಸ್ ಷೆಡ್ ಬಿಡಾಯಿಸುವ ಬಗ್ಯಾಗಿ ಅವಶ್ಯಕವಾಗಿರುತವೆ.

ನಂಬರ್.	ಮಾಲೀಕರು ಯಾ ಅನುಭವದಾರ್ರ ಹೆಸರುಗಳು.	ಬೀಜವರಿ. ಚದುರಡಿಗಳು.	ಎಕರೆಗಳು.	ಗುಂಟೆಗಳು.	ಪರಾ.
1	ಹೇಮಾಶಾಮಯ್ಯ, ಅನುಭವದಾರ ಕವಾಡಿಗರ ಮರಿಯಪ್ಪ ..	11,533½	..	10½	ತೊಲೆಗಳನ್ನು ಕಾಯ್ಯುವದಕ್ಕೆ ಉಪಯೋಗಿಸಿರುವ ಗುಣಿ.
2	ಷಾಪುನಾತಾಣಪಟ್ಟ ..	6,970	..	6½	ಮೈದಾನು (ಖಾಲಿಜಾಗ).
3	ಮೇಸ್ತ್ರಿ ನಾರಾಯಣಪ್ಪನ ಛತ್ರ ..	7,476	..	6¾	ಸರಹದ್ದು ಗೋಡೆಯು ಕಲ್ಲಿನಿಂದ ಕಟ್ಟಲ್ಪಟ್ಟಿದೆ. ವಶಾರದಲ್ಲಿ 46 ಅಂಕಣಗಳ ಹಂಚಿನಮನೆಯಿದೆ.
4	ಸೆಟ್ಟ್ಯೂರು ಕೃಷ್ಣಯ್ಯಂಗಾರ್, ಅನುಭವದಾರು ಮಂಜೇಪಲ್ಲಿ ನಂಜುಂಡಪ್ಪ ಮತ್ತು ಮರಿಯಪ್ಪ ..	9,126¼	..	8¼	ಮೈದಾನು (ಖಾಲಿಜಾಗ).
5	ಮೇಸ್ತ್ರಿ ಮರಿಯಪ್ಪನವರ ಛತ್ರ ..	19,737	..	18¼	ಸರಹದ್ದು ಗೋಡೆಗಾಗಿ ಕಲ್ಲುಚಪ್ಪಡಿಗಳು ಭೂಮಿಯಲ್ಲಿ ಹೂಳಲ್ಪಟ್ಟಿರುತ್ತವೆ ವಶಾರದಲ್ಲಿ 18 ಅಂಕಣಗಳ ಕಲ್ಲು ಮತ್ತು 32 ಅಂಕಣಗಳ ಹಂಚಿನ ಕಟ್ಟಡಗಳು ಯಿರುತವೆ.
6	ಕೇಪಗಿರಿರಾವ್, ಅನುಭವದಾರ್ ಯಂಗಣ್ಣಚಟ್ಟ ..	16,514¼	..	15¼	ಮೈದಾನು (ಖಾಲಿಜಾಗ). ಒಂದು ಹುಣಸೇಮರವಿದೆ.
7	ವೆಂಕಟೇಶಯ್ಯ ಮತ್ತು ಇತರರು, ಅನುಭವದಾರ್ ರಾಮಣ್ಣನ ಲಿಂಗಣ್ಣ.	12,240	..	11½	ಮೈದಾನು (ಖಾಲಿಜಾಗ).
8/1	ಯಂಗಣ್ಣಚಟ್ಟ ..	7,353¾	..	6¾	ಡಿಟೋ.
8/2	ನರಹರಿರಾವ್, ಸ್ಕೂಲ್ಮಾಸ್ಟರ್ ..	7,353¾	..	6¾	ಡಿಟೋ.
9	ಪುಟ್ಟಣ್ಣನ ಛತ್ರ ..	18,471	..	17	ಉತ್ತರ ಮತ್ತು ದಕ್ಷಿಣ ಗೋಡೆಗಳು ಕಲ್ಲುಚಪ್ಪಡಿಗಳಿಂದಲೂ, ಪೂರ್ವಕ್ಕೆ ಯಿಟ್ಟಿಗೆಯಿಂದಲೂ, ಪಶ್ಚಿಮಕ್ಕೆ ಕಲ್ಲಿನಿಂದಲೂ, ಕಟ್ಟಲ್ಪಟ್ಟಿವೆ, ವಶಾರವು 12 ಅಂಕಣ ಹಂಚುಗಳ, 7 ಅಂಕಣ ಕಲ್ಲಿನ ಮತ್ತು 24 ಅಂಕಣ ಮಣ್ಣಿನ ಮಾಳಿಗೆಯ ಕಟ್ಟಡಗಳು ವುಂಟಾಗಿವೆ.
10	ಮುತ್ತಿನ ಕಂಟಿಸ್ವಾಮಿಮಷ ..	23,061¼	..	21	ಕಲ್ಲಿನ ಸರಹದ್ದುಗೋಡೆಯಿದೆ, ವಶಾರದಲ್ಲಿ 9 ಅಂಕಣ ಕಲ್ಲಿನ ಮತ್ತು 10 ಅಂಕಣ ಹಂಚಿನ ಕಟ್ಟಡಗಳುಯಿವೆ.
11/1	ಚನ್ನಪಟ್ಟಣ ಶ್ರೀಪಾದರಾವ್, ಅನುಭವದಾರ್ ರಾಮಂಣನ ಲಿಂಗಣ್ಣ ..	10,665	..	9¾	ಮೈದಾನು (ಖಾಲಿಜಾಗ).
11/2	ಬೂಲಕೃಷ್ಣರಾವ್, ಅನುಭವದಾರ್ ಯಂಗಣ್ಣಚೆಟ್ಟ್ ..	10,665	..	9¾	ಡಿಟೋ.
12	ಗವರ್ಮೆಂಟ್ ..	153,791	3	21	ಯಿದರಲ್ಲಿ ಒಂದು ಹಂಚಿನಮಾಳಿಗೆ ಯಿದೆ.
13	ಡಿಟೋ ..	14,298	..	13	ಯಿದರೊಳಗೆ ಕಲ್ಲಿನಿಂದ ಕಟ್ಟಲ್ಪಟ್ಟ ಒಂದು ಛತ್ರವೂ ಮತ್ತು ಒಂದು ಆಕ್ಟ್ಯಾಯಿ ಚಾವಡಿಯೂ ಸಹ ಯಿದೆ.
	ಪಬ್ಲಿಕ್ರಸ್ತೆ ..	..	1	10	ರಸ್ತೆ.
	ಅಡ್ಡರಸ್ತೆ ..	..	..	20	ಅಡ್ಡರಸ್ತೆ.
	ಜುಮ್ಲಾ	..	9	12¼	

ತಾರೀಖು 2ನೇ ಜೂನ್ 1896.

ನಂ. 10599.—ಫಾ. ಫೈ. 38—95, ಸ್ 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 9ನೇ ಸೆಕ್ಷನ್ ನಿಯಮಗಳನುಸರಿಸಿ, ಮೈಸೂರ್ ಗವರ್ನ್‌ಮೆಂಟಿನವರು ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ತುಮಕೂರ ಡಿಸ್ಟ್ರಿಕ್ಟಿನಲ್ಲಿರುವ ಚಕ್ಕುಬಂದಿ ಮಾಡಲ್ಪಟ್ಟು ಮತ್ತು ವ್ಯವಸ್ಥೆಮಾಡಲ್ಪಟ್ಟ ಫಾರ್ಟಿಟೇರ್ಷ್‌ಗಳು ಮೇಲೆ ಹೇಳಲ್ಪಟ್ಟ ಫಾರೆಸ್ಟ್ ರೂಲ್ಸಿನ Iನೇ ರೂಲ್ ಅನುಸರಿಸಿ, ಗವರ್ನ್‌ಮೆಂಟ್ ಫಾರ್ಟಿಟೇರ್ಷ್‌ಗಳಾಗಿ ವಿಂಗಡಿಸಲ್ಪಡುವವು:—

ತಾಲ್ಲೂಕು.	ಫಾರ್ಟಿಟೇರ್ಷ್‌ಗಳ ಹೆಸರು.	ವಿಸ್ತೀರ್ಣ. ಎಕರೆಗಳು.	ವಿಸ್ತೀರ್ಣ. ಗುಂಟೆಗಳು.	ಚಕ್ಕುಬಂದಿ.
ತುಮಕೂರು.	(1) ಹೆರಹಳ್ಳಿ ರೆವಿನ್ಯೂ ಫಾರ್ಟಿಟೇರ್ಷ್	130	19	ಉತ್ತರಕ್ಕೆ—ಪೆನ್ಮನಹಳ್ಳಿಯ ಸರ್ವೆ ನಂ. 65, 66, 89, 88, 78 ಮತ್ತು 90 ಪೂರ್ವಕ್ಕೆ—ಡಣಾಯಿಕನಪುರ ಗ್ರಾಮದ ಯಲೆ ದಕ್ಷಿಣಕ್ಕೆ—ತಿಮ್ಮನಹಳ್ಳಿಯ ಸರ್ವೆ ನಂ. 71, 72 ವ 73 ಮತ್ತು ಚಿಕ್ಕಹಳ್ಳಿಯ ನಂ. 18, 19 ವ 21 ಪಶ್ಚಿಮಕ್ಕೆ—ತಿಮ್ಮನಹಳ್ಳಿಯ ಸರ್ವೆ ನಂ. 64 ವ 68
	(2) ನಾಗೇನಹಳ್ಳಿ ರೆವಿನ್ಯೂ ಫಾರ್ಟಿಟೇರ್ಷ್	14	16	ಉತ್ತರಕ್ಕೆ—ಯೆಲದಹಳ್ಳು ಗ್ರಾಮದ ಸರ್ವೆ ನಂ. 11 ಪೂರ್ವ—ಮತ್ತು ದಕ್ಷಿಣಕ್ಕೆ—ಸರ್ವೆ ನಂ. 54 ಪಶ್ಚಿಮಕ್ಕೆ—ಸರ್ವೆ ನಂ. 52
	(3) ದಾಸರಹಳ್ಳಿ ಫಾರೆಸ್ಟ್ ಫಾರ್ಟಿಟೇರ್ಷ್	290	37	ಉತ್ತರಕ್ಕೆ—ಸೀಗೇಪಾಳ್ಯದಗಡಿ ಮತ್ತು ದಾಸರಹಳ್ಳಿ (ಫಾರ್ಟಿಟೇರ್ಷ್)ಸರ್ವೆ ನಂ.41 ಪೂರ್ವಕ್ಕೆ—ಹೊನ್ನೇನಹಳ್ಳಿ ಮತ್ತು ಗರೆಹಳ್ಳಿ ಗ್ರಾಮಗಳ ಗಡಿ ದಕ್ಷಿಣಕ್ಕೆ—ದಾಸರಹಳ್ಳಿ ಗ್ರಾಮದ ಸರ್ವೆ ನಂ. 11 ಪಶ್ಚಿಮಕ್ಕೆ—ಮಲ್ಲೇನಹಳ್ಳಿ ಮತ್ತು ಕುಚಂಗಿಯ ಗಡಿ
	(4) ಮಲ್ಲಸಂದ್ರ ಫಾರೆಸ್ಟ್ ಫಾರ್ಟಿಟೇರ್ಷ್	107	37	ಉತ್ತರಕ್ಕೆ—ಗೊಲ್ಲಹಳ್ಳಿಯಗಡಿ ಮತ್ತು ಮಲ್ಲಸಂದ್ರ ಗ್ರಾಮದ ಸರ್ವೆ ನಂ 32 ಪೂರ್ವಕ್ಕೆ—ಸರ್ವೆ ನಂ. 45 ಮತ್ತು ವಲ್ಲಸಂದ್ರದ ಅಮೃತಮಹಲ್ ಕಾವಲ್ ದಕ್ಷಿಣಕ್ಕೆ—ಮಲ್ಲಸಂದ್ರ ಗ್ರಾಮದ ಸರ್ವೆ ನಂ. 47, 48 ವ 49 ಪಶ್ಚಿಮಕ್ಕೆ—ಸರ್ವೆ ನಂ. 36, 50 ವ 53
	(5) ಗೊಲ್ಲಹಳ್ಳಿ ಫಾರೆಸ್ಟ್ ಫಾರ್ಟಿಟೇರ್ಷ್	72	9	ಉತ್ತರಕ್ಕೆ—ಬಕ್ಕೋಡಿ ಗ್ರಾಮದ ಸರ್ವೆ ನಂ. 86, 87, 88 ವ 89 ಪೂರ್ವಕ್ಕೆ—ಬಕ್ಕೋಡಿ ಗ್ರಾಮದ ಸರ್ವೆ ನಂ. 15, 16, 17 ವ 18 ದಕ್ಷಿಣಕ್ಕೆ—ಬಕ್ಕೋಡಿ ಗ್ರಾಮದ ಸರ್ವೆ ನಂ. 8, 11, 12 ವ 14 ಪಶ್ಚಿಮಕ್ಕೆ—ಬುಬಮ್ಮನಹಳ್ಳಿ ಗ್ರಾಮದ ಗಡಿಬಾಂದು
	(6) ಬಳ್ಳಾಪುರ ಫಾರೆಸ್ಟ್ ಫಾರ್ಟಿಟೇರ್ಷ್	248	38	ಉತ್ತರಕ್ಕೆ—ಲಿಂಗೇನಹಳ್ಳಿ ಫಾರ್ಟಿಟೇರ್ಷ್ ಪೂರ್ವಕ್ಕೆ—ಬಳ್ಳಾಪುರದ ಗಡಿಬಾಂದು ದಕ್ಷಿಣಕ್ಕೆ—ಬಳ್ಳಾಪುರ ಗ್ರಾಮದ ಸರ್ವೆ ನಂ. 90, 91, 94, 124, 119, 120 ವ 13 ಪಶ್ಚಿಮಕ್ಕೆ—ಬಳ್ಳಾಪುರದ ಗಡಿಬಾಂದು
	(7) ಲಿಂಗೇನಹಳ್ಳಿ ಫಾರೆಸ್ಟ್ ಫಾರ್ಟಿಟೇರ್ಷ್	365	28	ಉತ್ತರಕ್ಕೆ—ಲಿಂಗೇನಹಳ್ಳಿಯ ಸರ್ವೆ ನಂ. 17, 18, 20 ವ 23 ಪೂರ್ವಕ್ಕೆ—ಲಿಂಗೇನಹಳ್ಳಿ ಗಡಿಬಾಂದು ದಕ್ಷಿಣಕ್ಕೆ—ಬಳ್ಳಾಪುರ ಫಾರ್ಟಿಟೇಷನಿನ ಗಡಿಬಾಂದು ಪಶ್ಚಿಮಕ್ಕೆ—ಲಿಂಗೇನಹಳ್ಳಿ ಗಡಿಬಾಂದು
	(8) ದೇವರಾಯದುರ್ಗ ಫಾರೆಸ್ಟಿನ ಗೊಲ್ಲಹಳ್ಳಿ ಫಾರೆಸ್ಟ್ಸ್ಫಾರ್ಟಿಟೇರ್ಷ್	225	8	ಉತ್ತರಕ್ಕೆ—ದೇವರಾಯದುರ್ಗದ ಸ್ಪೇಷ್ ಫಾರೆಸ್ಟಿನ ಸರಹದ್ದು ಲೈನು ಮತ್ತು ಗೊಲ್ಲಹಳ್ಳಿಯ ಸರ್ವೆ ನಂ. 12ರ ಭಾಗ ಪೂರ್ವಕ್ಕೆ—ಗೊಲ್ಲಹಳ್ಳಿ ಗ್ರಾಮದಗಡಿ ದಕ್ಷಿಣಕ್ಕೆ—ಡಿಟೋ ಡಿಟೋ ಪಶ್ಚಿಮಕ್ಕೆ—ಡಿಟೋ ಡಿಟೋ
ಮಧುಗಿರಿ.	(9) ದೊಡ್ಡವೀರಗೌಡನಹಳ್ಳಿ ರೆವಿನ್ಯೂ ಫಾರ್ಟಿಟೇರ್ಷ್	17		ಉತ್ತರಕ್ಕೆ—ಸಿರಾ ಹೈರೋಡು ಪೂರ್ವಕ್ಕೆ—ಸರ್ವೆ ನಂ. 64 ಮತ್ತು ಹಳ್ಳಿ ದಕ್ಷಿಣಕ್ಕೆ—ಸರ್ವೆ ನಂ. 64ರ 3 ಮತ್ತು 4ನೇ ಭಾಗಗಳು ಪಶ್ಚಿಮಕ್ಕೆ—ಸರ್ವೆ ನಂ. 14

ತಾಲ್ಲೂಕು.	ಪ್ಯಾಟೇರ್ಷಗಳ ಹೆಸರು.	ವಿಸ್ತೀರ್ಣ. ನಕರೆಗಳು.	ವಿಸ್ತೀರ್ಣ. ಗುಂಟೆಗಳು.	ಚಕ್ಕುಬಂದಿ.
ನಂದಗಿರಿ.	(10) ಸೂಳಕೆರೆ ಫಾರೆಸ್ಟ್ ಪ್ಯಾಟೇರ್ಷ	178	15	ಉತ್ತರಕ್ಕೆ—ಮೂರೆನಾಯಿಕನಹಳ್ಳಿಯ ಸರ್ವೆ ನಂ. 56 ಮತ್ತು ಗಟ್ಟಿ ತಿಮ್ಮನಹಳ್ಳಿಯ ನಂ. 4, 5, 6, 7, 8, 9 ವ 10 ಪೂರ್ವಕ್ಕೆ—ಮೂರೆನಾಯಿಕನಹಳ್ಳಿಯ ಸರ್ವೆ ನಂ. 12, 13 ವ 14 ಮತು ಗಟ್ಟಿ ತಿಮ್ಮನಹಳ್ಳಿಯ ಸರ್ವೆ ನಂ. 15, 16, 17, 18 ವ 25 ದಕ್ಷಿಣಕ್ಕೆ—ಗಟ್ಟಿತಿಮ್ಮನಹಳ್ಳಿಯ ಸರ್ವೆ ನಂ. 20 ಪಶ್ಚಿಮಕ್ಕೆ—ಗಟ್ಟಿತಿಮ್ಮನಹಳ್ಳಿಯ ಗಡಿಬಾಂದು
ಚಿಂತಾಮಣಿ.	(11) ರಾಂಬಾಣದ ಹಂತ ರೆವಿನ್ಯೂಪ್ಯಾಟೇರ್ಷ	23	18	ಉತ್ತರಕ್ಕೆ—ಸರ್ವೆ ನಂ. 39 ವ 108 ಮತ್ತು ರಾಂಬಾಣದ ಹಂತದನಾಲೆ ಪೂರ್ವಕ್ಕೆ—ಸರ್ವೆ ನಂ. 92, 103, 104, 106 ವ 109 ಮತ್ತು ಕುಣಿಕಲ್ ತಾಲ್ಲೂಕಿನ ಕೋಡಿಹಳ್ಳಿ ದಕ್ಷಿಣಕ್ಕೆ—ಗ್ರಾಮದ ಸರ್ವೆ ನಂ. 94, 95, 97, 103 ವ 104 ಪಶ್ಚಿಮಕ್ಕೆ—ಸರ್ವೆ ನಂ. 40 ವ 97 ಮತ್ತು ರಾಂಬಾಣದ ಹಂತದ ನಾಲಾ
	(12) ಕಾಡುಮತ್ತಿಕೆರೆ ರೆವಿನ್ಯೂ ಪ್ಯಾಟೇರ್ಷ	42	26	ಉತ್ತರಕ್ಕೆ—ಸರ್ವೆ ನಂ. 32 ವ 27 ಪೂರ್ವಕ್ಕೆ—ಸರ್ವೆ ನಂ. 13, 27 ವ 29 ದಕ್ಷಿಣಕ್ಕೆ—ಸರ್ವೆ ನಂ. 10 ವ 11 ಪಶ್ಚಿಮಕ್ಕೆ—ಅರಿಕೆರೆಗಣಿ ಮಟ್ಟದ ಗಡಿ
ಹುಳಿಯಾರ್ ಮತ್ತು ತಿಪ್ಪಟೂರು ತಾಲ್ಲೂಕು.	(13) ತೊರೆಸೂರಗೊಂಡನಹಳ್ಳಿ ರೆವಿನ್ಯೂ ಪ್ಯಾಟೇರ್ಷ	75	2	ಉತ್ತರಕ್ಕೆ—ಸರ್ವೆ ನಂ. 10 ವ 12 ಪೂರ್ವಕ್ಕೆ—ಓಜಕಹಟ್ಟ ಗ್ರಾಮದ ಯಲ್ಲೆ ದಕ್ಷಿಣಕ್ಕೆ—ಸರ್ವೆ ನಂ. 21, 21 ವ 23 ಪಶ್ಚಿಮಕ್ಕೆ—ಸರ್ವೆ ನಂ. 15 ಮತ್ತು ಸರ್ವೆ ನಂ. 8ರ 1 ವ 2ನೇ ಭಾಗಗಳು
ತುರುವೇಕೆರೆ ಮತ್ತು ತಿಪ್ಪಟೂರು ತಾಲ್ಲೂಕು.	(14) ಕೃಷ್ಣಾಪುರ ಕಾವಲ್ ರೆವಿನ್ಯೂ ಪ್ಯಾಟೇರ್ಷ	10	20	ಉತ್ತರಕ್ಕೆ—ಕಲ್ಲಂಜಿಹಳ್ಳಿ ಗ್ರಾಮದ ಯಲ್ಲೆ ಪೂರ್ವಕ್ಕೆ—ಸರ್ವೆ ನಂ. 4 ದಕ್ಷಿಣಕ್ಕೆ—ಸರ್ವೆ ನಂ. 3ರ 2ನೇ ಭಾಗ ಪಶ್ಚಿಮಕ್ಕೆ—ಸರ್ವೆ ನಂ. 5ರ 2ನೇ ಭಾಗ
ಗುಬ್ಬಿ ತಾಲ್ಲೂಕು.	(15) ಅಡಗೂರು ಫಾರೆಸ್ಟ್ ಪ್ಯಾಟೇರ್ಷ	219	19	ಉತ್ತರಕ್ಕೆ—ಅಡಗೂರು ಗ್ರಾಮದ ಸರ್ವೆ ನಂ. 131, 137, 141 ವ 147 ಪೂರ್ವಕ್ಕೆ—ಪ್ರಭಾವನಹಳ್ಳಿಯ ಗಡಿಬಾಂದು ದಕ್ಷಿಣಕ್ಕೆ—ಡಿಟೋ ಡಿಟೋ ಪಶ್ಚಿಮಕ್ಕೆ—ಅಡಗೂರ ಸರ್ವೆ ನಂ. 39 ಮತ್ತು ಪ್ರಭಾವನಹಳ್ಳಿಯ ನಂ. 26, 27, 28, 29, 30 ವ 31
ಕೊರಟಗೆರೆ ಮತ್ತು ತಿಪ್ಪಟೂರು ತಾಲ್ಲೂಕು.	(16) ಗಂಟಿಗನಹಳ್ಳಿ ಫಾರೆಸ್ಟ್ ಪ್ಯಾಟೇರ್ಷ	184	16	ಉತ್ತರಕ್ಕೆ—ಗಂಟಿಗನಹಳ್ಳಿಯ ಸರ್ವೆ ನಂ. 30, 31, 1, 37, 36, 11, 12 ವ 10 ಪೂರ್ವಕ್ಕೆ—ಗಂಟಿಗನಹಳ್ಳಿಯ ಸರ್ವೆ ನಂ. 9 ದಕ್ಷಿಣಕ್ಕೆ—ಗಂಟಿಗನಹಳ್ಳಿಯ ಗಡಿಬಾಂದು ಪಶ್ಚಿಮಕ್ಕೆ—ಡಿಟೋ ಡಿಟೋ

ತಾರೀಖು 1ನೇ ಜುಲೈ 1896.

ನಂ. 11335.—ಫಾ. ಫೈ. 1—96, ಫಾರೆಸ್ಟ್ಗಳ ಸಬ್ ಅಸಿಸ್ಟೆಂಟ್ ಕರ್ಷರೇವೇಟರ್ ಮೆಸ್ಸರ್ಸ್ ಪಿ. ಈ. ಬೆರ್ಸ್ಯಯವರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ ತಾಬೆಯಲ್ಲಿ ನೌಕರಿಭಾಗ್ಯಾಗಿ ತುಮಕೂರು ಡಿಸ್ಟ್ರಿಕ್ಟ್ಗೆ ಹಂಗಾಮಿಯಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.